# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 727 |
| ಮಾನ್ಯ ಸದಸ್ಯರ ಹೆಸರು | : | ಶ್ರೀ. ಅ. ದೇವೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 12-07-2023 |
| ಉತ್ತರಿಸುವ ಸಚಿವರು | : | ಮಾನ್ಯ ಲೋಕೋಪಯೋಗಿ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು-ಮಾಗಡಿ ಹೆದ್ದಾರಿ 85ರಲ್ಲಿ ಚತುಷ್ಪಥ ರಸ್ತೆ ಕಾಮಗಾರಿ ಈಗ ಯಾವ ಹಂತದಲ್ಲಿದೆ. | ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನ 2ನೇ ಸಾಲದ ನೆರವಿನೊಂದಿಗೆ ಕೆಶಿಪ್-3 ರಡಿಯಲ್ಲಿ ರೂ. 998.00 ಕೋಟಿಗಳ ಅಂದಾಜು ಮೊತ್ತದಲ್ಲಿ ಮಾಗಡಿ ಸೋಮವಾರಪೇಟೆ (SH-85) ರಸ್ತೆಯ 166 ಕಿಮೀ ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸಲು ಅನುಮೋದನೆಯಾಗಿರುತ್ತದೆ.<br><br>ಅದರಂತೆ ಈ ಯೋಜನೆಯ ಭಾಗವಾದ (ಪ್ಯಾಕೇಜ್-1ರ-ಸಿ) ಬೆಂಗಳೂರು (ನೈಸ್ ರಸ್ತೆ) ಜಂಕ್ಷನ್‌ನಿಂದ-ಮಾಗಡಿ ವರೆಗೆ (ಚತುಷ್ಪಥ ರಸ್ತೆ 36.7 ಕಿ.ಮೀ) ಮತ್ತು ಮಾಗಡಿಯಿಂದ ರಾಷ್ಟ್ರೀಯ ಹೆದ್ದಾರಿ 75 ರವರೆಗೆ (ಚಿಕ್ಕಮುದಿಗೆರೆ ಹಾಗೂ ಐಂದಹಳ್ಳಿ) (ದ್ವಿಪಥ ರಸ್ತೆ 14 ಕಿ.ಮೀ) ಒಟ್ಟಾರೆ 50.7 ಕಿ.ಮೀ ಉದ್ದದ ದ್ವಿಪಥ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಹೈಬ್ರಿಡ್ ಆನ್ಯೂಟಿ ಮಾದರಿಯಲ್ಲಿ ಕೈಗೊಳ್ಳಲು ಅನಮೋದನೆ ನೀಡಲಾಗಿದ್ದು, ಈ ಕಾಮಗಾರಿಯ ರಿಯಾಯಿತಿದಾರರಾದ ಮೆ॥ ಕೆ.ಎನ್. ಹೈವೇಸ್, ಡೆವಲಪ್‌ಮೆಂಟ್ ಪ್ರೈವೇಟ್ ಲಿಮಿಟೆಡ್‌ರವರು ದಿನಾಂಕ: 01.07.2020 ರಂದು ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ.<br><br>ಗುತ್ತಿಗೆ ಕರಾರಿನಂತೆ ದಿನಾಂಕ: 01.07.2020 ರಂದು ಪ್ರಾರಂಭಿಸಿ ಕಾಮಗಾರಿಯನ್ನು 24 ತಿಂಗಳ ಅವಧಿಯಲ್ಲಿ ಅಂದರೆ ದಿನಾಂಕ:30.06.2022ಕ್ಕೆ ಪೂರ್ಣಗೊಳಿಸಬೇಕಾಗಿರುತ್ತದೆ.<br><br>ಆದರೆ, ಕೋವಿಡ್-19ರ ಹಿನ್ನೆಲೆಯಲ್ಲಿ 2020ರ 1ನೇ ಅಲೆ ಮತ್ತು 2022 ರ 2ನೇ ಅಲೆಯಿಂದಾಗಿ, ಭೂಸ್ವಾಧೀನ ವಿಳಂಬ ಪರಿಣಾಮವಾಗಿ ಕಾಮಗಾರಿ ಕುಂಠಿತಗೊಂಡಿರುತ್ತದೆ. ಮುಂದುವರೆದು 2022ರ ಮಳೆಯ ಅತಿವೃಷ್ಟಿಯಿಂದ ಕಾಮಗಾರಿ ವಿಳಂಬವಾಗಿದ್ದು, ಸದರಿ ಕಾಮಗಾರಿಯನ್ನು ದಿನಾಂಕ:30.06.2024ಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ.<br><br>ಬೆಂಗಳೂರು (ನೈಸ್ ರಸ್ತೆ) ಜಂಕ್ಷನ್‌ನಿಂದ-ಮಾಗಡಿ ವರೆಗೆ ಒಟ್ಟು 36.7 ಕಿ.ಮೀ ಚತುಷ್ಪಥ ರಸ್ತೆ ಕಾಮಗಾರಿಯಲ್ಲಿ 15.00 ಕಿಮೀ ನಷ್ಟು ರಸ್ತೆ ಡಾಂಬರೀಕರಣ (DBM) ಪೂರ್ಣಗೊಂಡಿದ್ದು, ಉಳಿದ ರಸ್ತೆ ಅಭಿವೃದ್ಧಿ ಕಾರ್ಯ ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತದೆ. ಪ್ರಸ್ತುತವಾಗಿ ರಸ್ತೆ ಬದಿಯ ವಿದ್ಯುತ್ ಕಂಬಗಳ ಸ್ಥಳಾಂತರ, ಚರಂಡಿ, ಸೇತುವೆಗಳು, ಅಡ್ಡಮೋರಿಗಳ ನಿರ್ಮಾಣ ಮತ್ತು ಇತರೆ ಕೆಲಸಗಳು ಪ್ರಗತಿಯಲ್ಲಿರುತ್ತದೆ. |
| ಆ) | ಈ ರಸ್ತೆಯಲ್ಲಿ ಹಾದು ಹೋಗುವ ಚೋಳನಾಯಕನಹಳ್ಳಿ ಮತ್ತು ತಾವರೆಕೆರೆ ಗ್ರಾಮದಲ್ಲಿ ಎರಡು ಪಥ ರಸ್ತೆ ಮೇಲ್ಸೇತುವೆ ನಿರ್ಮಾಣದ ಕಾಮಗಾರಿ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; | ಬೆಂಗಳೂರು (ನೈಸ್ ರಸ್ತೆ) ಜಂಕ್ಷನ್ ನಿಂದ ಮಾಗಡಿ ಪಟ್ಟಣವರೆಗೆ 4 ಪಥ ನಿರ್ಮಾಣ ಕೈಗೊಳ್ಳಲಾಗಿದ್ದು, ಸದರಿ ರಸ್ತೆಯಲ್ಲಿ ತಾವರೆಕೆರೆ ಗ್ರಾಮ ವ್ಯಾಪ್ತಿಯಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿರುವ ಮೇಲ್ಸೇತುವೆ ಒಟ್ಟು ಉದ್ದ 1.30 ಕಿಮೀ ಇದ್ದು, ಚೋಳನಾಯಕನ ಹಳ್ಳಿಯಲ್ಲಿ ಯಾವುದೇ ಮೇಲ್ಸೇತುವೆ ಯೋಜಿಸಿರುವುದಿಲ್ಲ. |

| | | |
|---|---|---|
| | | ಗುತ್ತಿಗೆ ಕರಾರಿನಂತೆ, ತಾವರೆಕೆರೆ ಗ್ರಾಮ ವ್ಯಾಪ್ತಿಯ ಒಟ್ಟು 1.30 ಕಿ.ಮೀ. ಉದ್ದದ ಚತುಷ್ಪಥ ಮೇಲ್ಸೇತುವೆಯಲ್ಲಿ ಬೆಂಗಳೂರು ಕಡೆಗೆ 0.48 ಕಿ.ಮೀ. ಹಾಗೂ ಮಾಗಡಿ ಕಡೆಗೆ 0.55 ಕಿ.ಮೀ. RE-wall ಹಾಗೂ ಕೆಂಗೇರಿ–ತಾವರೆಕೆರೆ–ಸೋಂಡೆಕೊಪ್ಪ ಜಂಕ್ಷನ್‌ನಲ್ಲಿ 0.27 ಕಿ.ಮೀ. ವಯಾ ಡಕ್ಟ್‌ಅನ್ನು ಯೋಜಿಸಲಾಗಿತ್ತು. ಆದರೆ, ತಾವರೆಕೆರೆಯು ಬೆಂಗಳೂರು ನಗರಕ್ಕೆ ಹತ್ತಿರವಿದ್ದು, ಸದರಿ ಮೇಲ್ಸೇತುವೆಯ RE-wall ಉದ್ದವು ಹೆಚ್ಚಿರುವುದರಿಂದ ವಯಾ ಡಕ್ಟ್ ಉದ್ದವನ್ನು ಹೆಚ್ಚಿಸಿ RE-wall ಉದ್ದವನ್ನು ಕಡಿಮೆ ಮಾಡಲು ತಾವರೆಕೆರೆ ಸಾರ್ವಜನಿಕರು ಮತ್ತು ಜನ ಪ್ರತಿನಿಧಿಗಳು ಕೋರಿರುತ್ತಾರೆ. ಸದರಿ ಕೋರಿಕೆಯನ್ನು ತಾಂತ್ರಿಕವಾಗಿ ಪರಿಶೀಲಿಸಿ ವಯಾ ಡಕ್ಟ್ ಉದ್ದವನ್ನು 0.27 ಕಿಮೀ ನಿಂದ 0.99 ಕಿ.ಮೀ. ಗೆ ವಿಸ್ತರಿಸಿ ಬೆಂಗಳೂರು ಕಡೆಗೆ 0.21 ಕಿ.ಮೀ. ಹಾಗೂ ಮಾಗಡಿ ಕಡೆಗೆ 0.10 ಕಿ.ಮೀ. RE-wall ನಿರ್ಮಾಣಗೊಳಿಸಲು (ಮೇಲ್ಸೇತುವೆಯ 1.30 ಕಿಮೀ ಉದ್ದದಲ್ಲಿ ಬದಲಾವಣೆಯಿಲ್ಲದೆ) ಸಕ್ಷಮ ಪ್ರಾಧಿಕಾರದ ಮುಂದೆ ಮಂಡಿಸಿ, ಪ್ರಾಧಿಕಾರದ ಅನುಮೋದನೆಯನ್ನು ದಿನಾಂಕ: 04.07.2022 ರಂದು ಪಡೆಯಲಾಗಿದೆ. ಅದರಂತೆ, ಪರಿಷ್ಕೃತ ವಿನ್ಯಾಸದಂತೆ ಮೇಲ್ಸೇತುವೆ ನಿರ್ಮಾಣ ಕೈಗೊಳ್ಳಲು ಗುತ್ತಿಗೆದಾರರಿಗೆ ದಿನಾಂಕ: 17.01.2023 ರಂದು Change of scope ಆದೇಶವನ್ನು ನೀಡಲಾಗಿರುತ್ತದೆ. |
| ಇ) | ಕಾಮಗಾರಿ ನಿಧಾನಗತಿಯಲ್ಲಿ ನಡೆಯುತ್ತಿರಲು ಕಾರಣಗಳೇನು? | ಚತುಷ್ಪಥ ರಸ್ತೆ ನಿರ್ಮಾಣ ಕಾಮಗಾರಿಗೆ ಅವಶ್ಯವಿರುವ ಭೂಮಿಯನ್ನು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಡಳಿತದ ಮೂಲಕ ಭೂಸ್ವಾಧೀನ ಕೈಗೊಳ್ಳಲಾಗುತ್ತಿದ್ದು, ಜಿಲ್ಲಾಡಳಿತದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ಕೋವಿಡ್–19ರ 2020ರ 1ನೇ ಅಲೆ, 2021ರ 2ನೇ ಅಲೆ, 2022ರ ಅತಿವೃಷ್ಟಿ ಹಾಗೂ 2023ರ ವಿಧಾನಸಭೆ ಸಾರ್ವತ್ರಿಕ ಚುನಾವಣೆ ಕಾರ್ಯಗಳಿಗೆ ತೊಡಗಿಸಿದ ಹಿನ್ನೆಲೆಯಲ್ಲಿ ಭೂಸ್ವಾಧೀನ ಪ್ರಕ್ರಿಯೆ ವಿಳಂಬವಾಗಿರುತ್ತದೆ.<br>ತಾವರೆಕೆರೆ ಚತುಷ್ಪಥ ಮೇಲ್ಸೇತುವೆಯನ್ನು ಪರಿಷ್ಕೃತ ವಿನ್ಯಾಸದಂತೆ ನಿರ್ಮಾಣಗೊಳಿಸಲು ಗುತ್ತಿಗೆದಾರರಿಗೆ Change of scope ಆದೇಶವನ್ನು ದಿನಾಂಕ: 17.01.2023 ರಂದು ನೀಡಲಾಗಿದ್ದು, ಅದರಂತೆ ರಸ್ತೆ ಅಗಲವನ್ನು ವಿಸ್ತರಿಸಿ ಮೇಲ್ಸೇತುವೆ ನಿರ್ಮಾಣ ಸಂಬಂಧ ಈಗಾಗಲೇ ಸ್ವಾಧೀನ ಪಡಿಸಿಕೊಂಡಿರುವ ಕಟ್ಟಡಗಳ ತೆರವಿಗೆ ಕ್ರಮಕೈಗೊಂಡಿದ್ದು, ಈ ಸಮಯದಲ್ಲಿ ಕೆಲವು ಕಟ್ಟಡಗಳ ಬಾಧಿತ ಮಾಲೀಕರು ಮೇಲ್ಸೇತುವೆಗೆ ಪ್ರತಿರೋಧ ವ್ಯಕ್ತಪಡಿಸಿದ್ದು, ಈ ಬಗ್ಗೆ ಉಪವಿಭಾಗಾಧಿಕಾರಿಗಳು, ಬೆಂಗಳೂರು(ದಕ್ಷಿಣ) ರವರಿಗೆ ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಅಡೆತಡೆಗಳನ್ನು ಕಾನೂನಾತ್ಮಕವಾಗಿ ನಿವಾರಿಸಿ ಮೇಲ್ಸೇತುವೆ ಕಾಮಗಾರಿ ಕೈಗೊಳ್ಳಬೇಕಾಗಿರುವುದರಿಂದ ಕಾಮಗಾರಿ ನಿಧಾನಗತಿಯಾಗಿದೆ. |
| ಈ) | ಈ ಕಾಮಗಾರಿ ಪೂರ್ಣಗೊಳ್ಳಲು ಇನ್ನು ಎಷ್ಟು ಸಮಯಾವಕಾಶ ಬೇಕಾಗುತ್ತದೆ? | ದಿನಾಂಕ: 30.06.2024 ಕ್ಕೆ ಕಾಮಗಾರಿ ಪೂರ್ಣಗೊಳಿಸಲು ಯೋಜಿಸಲಾಗಿದೆ. |

ಸಂಖ್ಯೆ: ಲೋಇ E-249 ಇಎಪಿ 2023

(ಸತೀಶ್ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು

ಸತೀಶ ಜಾರಕಿಹೊಳಿ
ಲೋಕೋಪಯೋಗಿ ಸಚಿವರು